# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ.ನಂಃ 29/2015

ಸಾಕ್ಷಿಯ ಹೆಸರು ಃ ಕೃಷ್ಣಪ್ಪ ಎನ್ ಜಿ ಸಿ.ಡಬ್ಲ್ಯೂ ಃ 19

ತಂದೆ ಹೆಸರು ಃ ಲೇ. ಗಿರಿಯಪ್ಪ ಪಿ.ಡಬ್ಲ್ಯೂಃ 11

ವಯಸ್ಸು ಃ 51 ವರ್ಷ ಪ್ರಮಾಣೀಕರಿಸಿದ ದಿಃ 03.06.2026

ವೃತ್ತಿ ಃ ಡಿ ವೈ ಎಸ್ ಪಿ

ವಾಸ ಃ ಹಾಸನ

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಎ.ಪಿ.ಪಿ.ರವರಿಂದಃ

ನಾನು ದಿನಾಂಕ 28.10.2013 ರಿಂದ 12.05.2015 ರವರೆಗೆ ಹೊಳೆನರಸೀಪುರ ವೃತ್ತ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 28.05.2014 ರಂದು ಚಾ ಸಾ 18 ರವರಿಂದ ಈ ಪ್ರಕರಣ ಕಡತವನ್ನು ಪಡೆದು ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನಾ ಚಾ ಸಾ 17 ರವರಿಗೆ ಮೃತ ರಂಗಸ್ವಾಮಿ ರವರ ಶವ ಪಂಚನಾಮೆ ಜರುಗಿಸಿ ಮರಣೊತ್ತರ ಪರೀಕ್ಷೆ ನಂತರ ಮೃತರ ಶವವನ್ನು ಅವರ ವಾರಸುದಾರರಿಗೆ ನೀಡಿ ಶವ ಸಂದಾಯ ರಶೀದಿಯನ್ನು ಪಡೆದು ತಂದು ವರದಿ ಮಾಡುವಂತೆ ಜ್ಞಾಪನ ಪತ್ರ ನೀಡಿರುತ್ತೇನೆ. ಅವರು ಆದೇಶದಂತೆ ದಿನಾಂಕ 29.05.2014 ರಂದು ಹಾಜರಿಸಿದ ದಾಖಲಾತಿಗಳನ್ನು ಪಡೆದು ಕಡತಕ್ಕೆ ಸೇರಿರುತ್ತೇನೆ. ಅದೇ ದಿನಾ ಚಾ ಸಾ 16 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 29.05.2014 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾ ಸಾ 5 ಮತ್ತು 6 ರವರ ಸಮಕ್ಷಮ ಚಾ ಸಾ 1 ತೋರಿಸಿರುವ ಸ್ಥಳದಲ್ಲಿ ಮದ್ಯಾಹ್ನ 12.00 ರಿಂದ 1.00 ರವರೆಗೆ ಮಹಜರ್ ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ಕೃತ್ಯಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ನಂತರ ಹನುಮನಹಳ್ಳಿಗೆ ಭೇಟಿ ನೀಡಿ ಆರೋಪಿ ಮತ್ತು ಅಪಘಾತ ಪಡಿಸಿದ ಕೆ ಎ 13 ಇ ಬಿ 4086 ಬೈಕಿನ ಪತ್ತೆಗಾಗಿ ಚಾ ಸಾ 18 ರವರನ್ನು ನೇಮಿಸಿರುತ್ತೇನೆ.

ದಿನಾಂಕ 27.06.2014 ರಂದು ಕೆ ಎ 13 ಇ ಬಿ 4086 ಬೈಕಿನ ಬಿ ಎಕ್ಸ್ಟ್ರಾಕ್ಟ್ ನೀಡುವಂತೆ ಚಾ ಸಾ 15 ರವರಿಗೆ ತಿಳಿಸಿರುತ್ತೇನೆ. ಅದೇ ದಿನಾ ಅವರಿಂದ ದಾಖಲೆ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿನಾಂಕ 28.06.2014 ರಂದು ಬಿ ಎಕ್ಸ್ಟ್ರಾಕ್ಟ್ ನಲ್ಲಿ ನಮೂದಾಗಿದ್ದ ಹೆಸರಿನ ಮಂಜುನಾಥ ಬಿನ್ ಜವರಯ್ಯ ಹೆಸರಿನವರಿಗೆ ಐ ಎಮ್ ವಿ ಕಲಂ 133 ರ ನೋಟೀಸನ್ನು ಜಾರಿ ಮಾಡಲು ಹೋದಾಗ ಅವರ ಮನೆಯಲ್ಲಿರದ ಕಾರಣ ಅವರ ತಂದೆ ಜವರಯ್ಯರವರಿಗೆ ಸದರಿ ಬೈಕಿನ ದಾಖಲೆಗಳನ್ನು ತಂದು ಹಾಜರಾಗುವಂತೆ ಮಂಜುನಾಥರವರಿಗೆ ತಿಳಿಸಲು ಹೇಳಿರುತ್ತೇನೆ.

ದಿನಾಂಕ 13.08.2014 ರಂದು ಮೃತರ ಪಿ ಎಮ್ ವರದಿಯನ್ನು ಚಾ ಸಾ 14 ರವರಿಂದ ಬಂದಿದ್ದು ಅದನ್ನು ಪರಿಶೀಲಿಸಿ ಕಡತಕ್ಕೆ ಸೇರಿಸಿರುತ್ತೇನೆ.

ದಿನಾಂಕ 06.11.2014 ರಂದು ಈ ಪ್ರಕರಣದಲ್ಲಿ ಅಪಘಾತ ಪಡಿಸಲಾದ ಬೈಕಿನ ಪತ್ತೆಗಾಗಿ ಚಾ ಸಾ 8 ರವರನ್ನು ನೇಮಕ ಮಾಡಿರುತ್ತೇನೆ. ಅದರಂತೆ ಅವರು ಸದರಿ ಬೈಕನ್ನು ಐಚನಹಳ್ಳಿಯಲ್ಲಿ ಪತ್ತೆ ಮಾಡಿ ವೃತ್ತ ಕಛೇರಿಗೆ ತಂದು ಹಾಜರಿಸಲಾಗಿ ಅದನ್ನು ಚಾ ಸಾ 9 ಮತ್ತು 10 ರವರ ಸಮಕ್ಷಮ ಚಾ ಸಾ 8 ರವರು ಹಾಜರಿಸಿದ ಬೈಕನ್ನು ಬೆಳಿಗ್ಗೆ 11.00 ರಿಂದ 11.30 ರವರಗೆ ಮಹಜರ್ ಮಾಡಿ ಅಮಾನತ್ ಪಡಿಸಿಕೊಂಡಿರುತ್ತೇನೆ. ಬೈಕನ್ನು ಪರಿಶೀಲಿಸಲಾಗಿ ಅದು ಹಿರೋಪ್ಯಾಷನ್ ಪ್ರೋ ಕಂಪೆನಿಯ ಕಪ್ಪು ಬಣ್ಣದ ಕೆ ಎ 13 ಇ ಬಿ 4086 ನ ಬೈಕಾಗಿದ್ದು ಅದನ್ನು ಮಾಲುಪಟ್ಟಿ ಸಂಖ್ಯೆ 281/2014 ದಾಖಲಿಸಿ ನ್ಯಾಯಾಲಯಕ್ಕೆ ಹಾಜರಿಸಿರುತ್ತೇನೆ. ಸಾಕ್ಷಿ ನಿ ಪಿ 4 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಸಹಿಯನ್ನು ನಿ ಪಿ 4(ಡಿ) ಎಂದು ಗುರುತಿಸಲಾಯಿತು.

ದಿನಾಂಕ 07.11.2014 ರಂದು ಅಪಘಾತ ಪಡಿಸಿದ ಬೈಕಿನ ಮಾಲೀಕ ಮಂಜುನಾಥರವರು ಕಛೇರಿಗೆ ಹಾಜರಾಗಿದ್ದು ಅವರಿಗೆ ಕಲಂ 133 ರ ನೋಟೀಸನ್ನು ಜಾರಿ ಮಾಡಿ ಅವರಿಂದ ದೃಢಿಕರಣ ಪಡೆದುಕೊಂಡಿರುತ್ತೇನೆ. ಅದೇ ದಿನಾ ಆರೋಪಿ ಕಛೇರಿಗೆ ಹಾಜರಾಗಿದ್ದು ಅವರಿಗೆ ಕಲಂ 41ಎ ನೋಟೀಸನ್ನು ಜಾರಿ ಮಾಡಿ ಅವರನ್ನು ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 08.11.2014 ರಂದು ಈ ಪ್ರಕರಣದಲ್ಲಿ ಅಪಘಾತ ಪಡಿಸಿದ ಬೈಕಿನ ಐ ಎಮ್ ವಿ ವರದಿ ನೀಡುವಂತೆ ಚಾ ಸಾ 15 ರವರಿಗೆ ಮನವಿ ನೀಡಿರುತ್ತೇನೆ.

ದಿನಾಂಕ 12.11.2014 ರಂದು ಈ ಪ್ರಕರಣದಲ್ಲಿ ಅಪಘಾತ ಪಡಿಸಿದ ಬೈಕಿನ ಮಾಲೀಕರಾದ ಮಂಜುನಾಥರವರಿಗೆ ನ್ಯಾಯಾಲಯದ ಆದೇಶದಂತೆ ಇಂಡಿಮಿನಿಟಿ ಬಾಂಡ್ ಮತ್ತು ದಾಖಲಾತಿಗಳನ್ನು ಪಡೆದು ಬೈಕನ್ನು ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 13.11.2014 ರಂದು ಚಾ ಸಾ 1 ರವರ ಮರು ಹೇಳಿಕೆ ಮತ್ತು ಚಾ ಸಾ 3 ಮತ್ತು ಚಾ ಸಾ 4 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೆನೆ.

ದಿನಾಂಕ 26.11.2014 ರಂದು ಆರ್ ಟಿ ಓ ಕಛೇರಿ, ಹಾಸನ ರವರಿಂದ ಅಪಘಾತ ಪಡಿಸಿದ ಬೈಕಿನ ಐ ಎಮ್ ವಿ ವರದಿ ಬಂದಿದ್ದು ಅದನ್ನು ಕಡತಕ್ಕೆ ಸೇರಿಸಿರುತ್ತೇನೆ. ಅದೇ ದಿನಾ ಆರೋಪಿಗಳ ವಿರುದ್ದ ಪ್ರಾಥಮಿಕ ಆರೋಪ ದೃಢಪಟ್ಟಿದ್ದು ಅವರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸಾಕ್ಷಿ ನಿ ಪಿ 2 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಸಹಿಯನ್ನು ನಿ ಪಿ 2(ಡಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಕಡತದಲ್ಲಿ ಪಿ ಎಫ್ ವರದಿ ಮತ್ತು ಕಲಂ 41ಎ ನೋಟೀಸ್ ಪ್ರತಿ ಇರುವುದಿಲ್ಲ. ಸಾಕ್ಷಿ ನಿ ಪಿ 8 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಸಹಿಯನ್ನು ನಿ ಪಿ 8 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗೆ ಇಂಡಿಮಿನಿಟಿ ಬಾಂಡ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 10 ಮತ್ತು ಸಹಿಯನ್ನು ನಿ ಪಿ 10(ಎ) ಎಂದು, ಇಂಡಿಮಿನಿಟಿ ಬಾಂಡ್ ಸಮಯದ ಛಾಯಚಿತ್ರವನ್ನು ನಿ ಪಿ 10(ಬಿಸಿ ಎಂದು ಗುರುತಿಸಲಾಯಿತು. ಕಲಂ 133 ರ ನೋಟಿಸಿನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದ ಅದನ್ನು ನಿ ಪಿ 11 ಮತ್ತು ಸಹಿಯನ್ನು ನಿ ಪಿ 11(ಎ) ಎಂದು ಗುರುತಿಸಲಾಯಿತು. ಸಾಕ್ಷಿ ದೃಡಿಕರಣದಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 12 ಮತ್ತು ಸಹಿಯನ್ನು ನಿ ಪಿ 12(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿ ಪಿ 7 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಮಾನ್ಯ ಎ ಪಿ ಪಿ ರವರಿಂದಃ

ಚಾ ಸಾ 16 ರವರ ಹೇಳಿಕೆಯನ್ನು ದಿನಾಂಕ 28.05.2014 ರಂದು ಪಡೆದುಕೊಂಡಿದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು ತಾವು ಹೇಳಿಕೆಯನ್ನು ದಿನಾಂಕ 29.05.2014 ರಂದೇ ಪಡೆದುಕೊಂಡಿದ್ದು ಆದರೆ ಕೈ ತಪ್ಪಿನಿಂದ ಕಲಂ 161 ರ ಹೇಳಿಕೆಯಲ್ಲಿ ಆ ದಿನಾ ನಮೂದಾಗಿರುತ್ತದೆ ಎನ್ನುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಹೆಚ್ ವಿ ಜೆ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಪ್ರ ವ ವ ದ ನಂತರ ಸಂಪೂರ್ಣ ತನಿಖೆ ಮಾಡಿರುತ್ತೇನೆ. ಚಾ ಸಾ 18 ರವರಿಂದ ಕಡತ ವನ್ನು ದಿನಾಂಕ 28.05.2014 ರಂದು ಪಡೆದು ಅದೇ ದಿನಾ ಪರಿಶೀಲಿಸಿರುತ್ತೇನೆ. ಶವ ತನಿಖೆಗೆ ನಾನು ಖುದ್ದಾಗಿ ಹೋಗಿಲ್ಲ ಎಂದರೆ ಸರಿ. ದಿನಾಂಕ 29.05.2014 ರಂದು ಚಾ ಸಾ 16 ರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ಸ್ಥಳ ಪಂಚನಾಮೆಗೆ ಹಾಜರಾಗಲು ಚಾ ಸಾ 5 ಮತ್ತು 6 ರವರಿಗೆ ನೋಟೀಸ್ ಜಾರಿ ಮಾಡಿಲ್ಲ. ಚಾ ಸಾ 9 ಮತ್ತು 10 ರವರಿಗೂ ಸಹ ಮಹಜರ್ ಬರಲು ನೋಟೀಸ್ ಜಾರಿ ಮಾಡಿಲ್ಲ. ಅಪಘಾತ ಪಡಿಸಿದ ಬೈಕಿನ ಪತ್ತೆಗಾಗಿ ನಾನು ಚಾ ಸಾ 18 ರವರನ್ನು ನೇಮಿಸಿಲ್ಲ, ಚಾ ಸಾ 15 ರವರಿಗೆ ಜ್ಞಾಪನ ಪತ್ರ ನೀಡಿಲ್ಲ, ಆರ್ ಸಿ ಮಾಲೀಕರಿಗೆ ನೋಟೀಸ್ ಜಾರಿ ಮಾಡಿಲ್ಲ, ಚಾ ಸಾ 14 ರವರಿಂದ ಪಿ ಎಮ್ ವರದಿ ಪಡೆದಿಲ್ಲ, ಮಂಜುನಾಥರವರಿಗೆ ಕಲಂ 133 ರ ನೋಟೀಸ್ ಜಾರಿ ಮಾಡಿಲ್ಲ ಹಾಗೂ ಅವರಿಗೆ ಬೈಕನ್ನು ಬಿಡುಗಡೆ ಮಾಡಿಲ್ಲ, ಆರ್ ಟಿ ಓ ಕಛೇರಿಯಿಂದ ಐ ಎಮ್ ವಿ ವರದಿ ಪಡೆದಿಲ್ಲ, ಚಾ ಸಾ 1 ರವರಿಗೆ ಸಹಾಯ ಮಾಡಲು ಮತ್ತು ಎರಡನೇ ಆರೋಪಿ ತಪ್ಪು ಮಾಡದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯಃ

ಮರು ವಿಚಾರಣೆ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

**1**ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ